**ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ದಿನಾಂಕ:23.04.2021**

**ಪತ್ರಿಕಾ ಪ್ರಕಟಣೆ**

**ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ**

**ಮೊ.ಸಂ.116/2021 ಕಲಂ 20(b), (2) (b) NDPS ಕಾಯ್ದೆ.**

ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆರ್.ಎಲ್.ಜಾಲಪ್ಪ ಕಾಲೇಜು ಬಳಿ ದಿನಾಂಕ:23.04.2021 ರಂದು ಬೆಳಿಗ್ಗೆ 08-00 ಗಂಟೆಗೆ ಸುಮಾರು 20-25 ವರ್ಷದ ಯುವಕ ಚಿನ್ನದಂತ ಬಣ್ಣದ ಕಾರಿನಲ್ಲಿ ಮಾದಕ ವಸ್ತುವಾದ ಗಾಂಜಾವನ್ನು ಮಾರಾಟ ಮಾಡಲು ತಂದಿರುವುದಾಗಿ ಬಾತ್ಮೀದಾರರಿಂದ ಬಂದ ಮಾಹಿತಿ ಮೇರೆಗೆ, ದಾಳಿನಡೆಸಿ ಆರೋಪಿಯನ್ನು ವಶಕ್ಕೆ ಪಡೆದು ಅವನಿಂದ 1 ಕೆ.ಜಿ. 400 ಗ್ರಾಂ ತೂಕದ, 40 ಸಾವಿರ ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡು ಮೇಲ್ಕಂಡಂತೆ ಪ್ರಕರಣ ದಾಖಲಾಗಿರುತ್ತದೆ. ಸದರಿ ಆರೋಪಿ ದೊಡ್ಡಬಳ್ಳಾಪುರ ತಾಲ್ಲೋಕಿನವನಾಗಿದ್ದು ಗಾಂಜಾವನ್ನು ಎಲ್ಲಿಂದ ತಂದ ಎನ್ನುವ ಬಗ್ಗೆ ತನಿಖೆ ಮುಂದುವರೆದಿದೆ.

ಮೇಲ್ಕಂಡ ದಾಳಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ರವಿ ಡಿ.ಚನ್ನಣ್ಣವರ್ ಐ.ಪಿ.ಎಸ್, ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ ಲಕ್ಷ್ಮೀಗಣೇಶ್, ದೊಡ್ಡಬಳ್ಳಾಪುರ ಉಪ-ವಿಭಾಗದ ಡಿ.ವೈ.ಎಸ್.ಪಿ. ಶ್ರೀ ಟಿ. ರಂಗಪ್ಪ ರವರ ಮಾರ್ಗದರ್ಶನದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರವರಾದ ಶ್ರೀ ಬಿ.ಎಸ್. ಸತೀಶ್ ರವರ ನೇತೃತ್ವದಲ್ಲಿ ಪಿ.ಎಸ್.ಐ ಶ್ರೀ ರಂಗಸ್ವಾಮಯ್ಯ, ಸಿಬ್ಬಂದಿಗಳಾದ ಶ್ರೀ ರಾಧಾಕೃಷ್ಣ ಹೆಚ್.ಸಿ.834 ಶ್ರೀ ರಂಗನಾಥ್ ಹೆಚ್.ಸಿ.547, ಶ್ರೀ ಶಿವಾನಂದ ಪಿ.ಸಿ.1453 ರವರು ಯಶಸ್ವಿಗೊಳಿಸಿರುತ್ತಾರೆ.

. ಆರೋಪಿ ವಿವರ




ಹೇಮಂತಕುಮಾರ್ ಆರ್.ಎಂ. ಬಿನ್ ಮುನಿಆಂಜಿನಪ್ಪ, 24 ವರ್ಷ, ಗೊಲ್ಲರು, ಖಾಸಗಿ ಕಂಪನಿಯಲ್ಲಿ ಕೆಲಸ, ರಘುನಾಥಪುರ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೋಕ್.

ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ.